# ಟ್ವಿಟರ್: ಸಾಫ್ಟ್ ಬ್ಲಾಕ್!

■ ಶಶಿಕುಮಾರ್ ಸಿ.



ಫೇಸ್‌ಬುಕ್ ಮತ್ತು ಅದರ ಒಡೆತನದ ಆ್ಯಪ್‌ಗಳು ಇತ್ತೀಚೆಗೆ ಕೆಲವು ಗಂಟೆಗಳ ಕಾಲ ಸ್ಥಗಿತಗೊಂಡಿದ್ದಾಗ, ಆ ಸಾಮಾಜಿಕ ಜಾಲತಾಣಗಳ ಬಳಕೆದಾರರು ಪರ್ಯಾಯ ರೂಪದಲ್ಲಿ ಹೆಚ್ಚು ಅವಲಂಬಿಸಿದ್ದು ಟ್ವಿಟರ್ ಅನ್ನು. ಆ ಟ್ರೆಂಡ್ ಅನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗುವ ನಿಟ್ಟಿನಲ್ಲಿ 'ಸಾಫ್ಟ್ ಬ್ಲಾಕ್' ಅನ್ನುವ ಫೀಚರ್ ಅನ್ನು ಟ್ವಿಟರ್ ಪರಿಚಯಿಸಿದ್ದು, ಈ ಬಗ್ಗೆ ತನ್ನ ಟ್ವಿಟರ್‌ಸಪೋರ್ಟ್ (@TwitterSupport) ಖಾತೆಯಿಂದ ಮಾಹಿತಿ ಹಂಚಿಕೊಂಡಿದೆ.

ಟ್ವಿಟರ್ ಬಳಕೆದಾರರಿಗೆ ತಮ್ಮ ಫಾಲೋವರ್ಸ್ ಅನ್ನು ಬ್ಲಾಕ್ ಮಾಡದೆಯೇ ತೆಗೆದುಹಾಕುವ ಅವಕಾಶವನ್ನು ಈ ಫೀಚರ್ ಕಲ್ಪಿಸುತ್ತದೆ. ಇಂಥದೊಂದು ಆಯ್ಕೆಯನ್ನು ಕಳೆದ ಸೆಪ್ಟೆಂಬರ್‌ನಲ್ಲೇ ಪ್ರಾಯೋಗಿಕ ಪರೀಕ್ಷೆಗೆ ಒಳಪಡಿಸಲಾಗಿತ್ತು. ಈಗ ಎಲ್ಲರಿಗೂ ಅದು ಲಭ್ಯವಿದ್ದು, ಅದಕ್ಕಾಗಿ, ಆ್ಯಪ್ ಅನ್ನು ಒಮ್ಮೆ ಅಪ್‌ಡೇಟ್ ಮಾಡಿಕೊಳ್ಳಬೇಕಷ್ಟೆ.

'ಸಾಫ್ಟ್ ಬ್ಲಾಕ್ ಬಳಸಿ ಟ್ವಿಟರ್ ಖಾತೆದಾರರು ತಮ್ಮ ಖಾತೆಯಿಂದ ಯಾರನ್ನಾದರೂ ತೆಗೆದುಹಾಕಿದರೆ, ಖಾತೆದಾರರ ಟ್ವೀಟ್‌ಗಳು ಇನ್ನು ಮುಂದೆ ಅವರ ಟೈಮ್‌ಲೈನ್‌ನಲ್ಲಿ ಸ್ವಯಂಚಾಲಿತವಾಗಿ ಕಾಣುವುದಿಲ್ಲ. ಅಲ್ಲದೇ 'ಈ ಖಾತೆದಾರರು ತಮ್ಮನ್ನು ಬ್ಲಾಕ್ ಮಾಡಿದ್ದಾರೆ' ಎಂದು ಅಪಪ್ರಚಾರ ಮಾಡುತ್ತಿದ್ದರು. ಹೀಗಾಗಿಯೇ ಬದಲಾವಣೆ ಕುರಿತು ತೆಗೆದುಹಾಕಿದ ಖಾತೆದಾರರಿಗೆ ಯಾವುದೇ ಸೂಚನೆಯನ್ನೂ ಇನ್ನುಮುಂದೆ ನೀಡಲಾಗುವುದಿಲ್ಲ' ಎಂದಿದೆ ಟ್ವಿಟರ್.

ಖಾತೆದಾರರಿಗೆ ತಮ್ಮ ಫಾಲೋವರ್ಸ್ ಪಟ್ಟಿಯ ಮೇಲ್ವಿಚಾರಕರಾಗುವ ಅವಕಾಶವನ್ನೂ 'ಸಾಫ್ಟ್ ಬ್ಲಾಕ್' ಕಲ್ಪಿಸುತ್ತದೆ. ಈ ಟೂಲ್ ಬಳಸಿ ಫಾಲೋವರ್ಸ್ ಪಟ್ಟಿಯ ಮೇಲೆ ಹೆಚ್ಚಿನ ನಿಯಂತ್ರಣ ಹೊಂದಬಹುದು. ಅನಗತ್ಯವಾಗಿ ಕಿರಿಕಿರಿ ಉಂಟು ಮಾಡುವವರನ್ನು ತೆಗೆಯಬಹುದು. 'ಪ್ರಶ್ನೆ ಮಾಡಿದ್ದಕ್ಕೆ ಇವರು ತಮ್ಮನ್ನು ಬ್ಲಾಕ್ ಮಾಡಿದ್ದಾರೆ' ಎಂದು ಅಪಪ್ರಚಾರ ಮಾಡುವವರನ್ನೂ ಫಾಲೋವರ್ಸ್ ಪಟ್ಟಿಯಿಂದ ಕಿತ್ತು ಹಾಕಬಹುದು.

ವಾಸ್ತವವಾಗಿ ನೋಡುವುದಾದರೆ, ಟ್ವಿಟರ್‌ನಲ್ಲಿ ಫಾಲೋವರ್ಸ್ ಅನ್ನು ನಿರ್ಬಂಧಿಸುವುದು (ಬ್ಲಾಕ್) ಮತ್ತು ತೆಗೆಯುವುದು (ರಿಮೂವ್) ಬೇರೆ ಬೇರೆಯ ವಿಧಾನ. ಫಾಲೋವರ್ಸ್ ಅನ್ನು ತೆಗೆದ ನಂತರ ಅವರ ಫೀಡ್‌ನಲ್ಲಿ ನಿಮ್ಮ ಟ್ವೀಟ್‌ಗಳು ಕಾಣುವುದಿಲ್ಲ. ಆದರೆ ತೆಗೆದುಹಾಕಲಾದ ವ್ಯಕ್ತಿಯು ನಿಮ್ಮ ಟ್ವೀಟ್‌ಗಳನ್ನು ನೋಡಬಯಸಿದಲ್ಲಿ ಮತ್ತೆ ನಿಮ್ಮನ್ನು ಹಿಂಬಾಲಿಸಬೇಕಾಗುತ್ತದೆ. ಆ ಆಯ್ಕೆಯೂ ಇದೆ. ಯಾರನ್ನಾದರೂ ನಿರ್ಬಂಧಿಸುವುದು ನಿಮ್ಮ ಪ್ರೊಫೈಲ್‌ಗೆ ಅವರ ಪ್ರವೇಶವನ್ನು ಸಂಪೂರ್ಣವಾಗಿ ಕಡಿತಗೊಳಿಸಿದಂತೆ.

ಕಾಮೆಂಟ್ ರೂಪದಲ್ಲಿ ಕೆಟ್ಟ ಭಾಷೆಯನ್ನು ಬಳಸಿದ್ದಕ್ಕೆ ಮತ್ತು ಆಹ್ವಾನಿಸದೇ ಪ್ರತ್ಯುತ್ತರಗಳನ್ನು ಕಾಮೆಂಟ್ ರೂಪದಲ್ಲಿ ನೀಡಿದ್ದಕ್ಕೆ 'ಫಾಲೋವರ್ಸ್' ಅನ್ನು ಏಳು ದಿನಗಳ ಅವಧಿಗೆ ಖಾತೆಗಳನ್ನು ತಾತ್ಕಾಲಿಕವಾಗಿ ನಿರ್ಬಂಧಿಸುವ ಅಧಿಕಾರವನ್ನು ಖಾತೆದಾರರಿಗೆ ನೀಡುವ ಸಲುವಾಗಿ ಸುರಕ್ಷತಾ ಫೀಚರ್ ಅಭಿವೃದ್ಧಿಪಡಿಸಲಾಗುತ್ತಿದೆ ಎಂದ ಟ್ವಿಟರ್ ಈಗಾಗಲೇ ಘೋಷಿಸಿದೆ.

### ತೆಗೆಯುವುದು ಹೇಗೆ?

ಖಾತೆದಾರರು ಫಾಲೋವರ್ಸ್ ಪಟ್ಟಿಯಿಂದ ಯಾರನ್ನಾದರೂ ತೆಗೆಯಬಯಸಿದರೆ ಅಂತಹ ಫಾಲೋವರ್ಸ್ ಹೆಸರಿನ ಆಯ್ಕೆಯ ಮೇಲೆ ಕ್ಲಿಕ್ ಮಾಡಬೇಕು. ನಂತರ ಆ ಹೆಸರಿನ ಪಕ್ಕದಲ್ಲಿ ಕಾಣುವ ಮೂರು ಡಾಟ್‌ಗಳ ಐಕಾನ್ ಅನ್ನು ಕ್ಲಿಕ್ ಮಾಡಿದರೆ ಹಲವಾರು ಆಯ್ಕೆಗಳು ತೆರೆದುಕೊಳ್ಳುತ್ತವೆ. ಅವುಗಳ ಪೈಕಿ ರಿಮೂವ್ ಆಯ್ಕೆಯ ಮೇಲೆ ಕ್ಲಿಕ್ಕಿಸಿದರೆ ನೀವು ಇಚ್ಛಿಸಿದ ವ್ಯಕ್ತಿಯನ್ನು ನಿಮ್ಮ ಖಾತೆಯಿಂದ ತೆಗೆದಂತೆ.

'ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ತೆಗೆದುಹಾಕಿದವರ ಖಾತೆಯ ಟೈಮ್‌ಲೈನ್‌ನಲ್ಲಿ ಸ್ವಯಂಚಾಲಿತವಾಗಿ ನಿಮ್ಮ ಪೋಸ್ಟ್‌ಗಳು ಕಾಣಿಸುವುದಿಲ್ಲ. ನೀವು ಅವರನ್ನು ಫಾಲೋವರ್ಸ್ ಪಟ್ಟಿಯಿಂದ ತೆಗೆದುಹಾಕಿದ್ದರ ಬಗ್ಗೆಯೂ ಯಾವುದೇ ರೀತಿಯ ಸೂಚನೆಗಳು ಅವರಿಗೆ ಹೋಗುವುದಿಲ್ಲ. ಈ ಮೂಲಕ ನಿಮ್ಮ ಫಾಲೋವರ್ಸ್ ಪಟ್ಟಿಯ ಮೇಲ್ವಿಚಾರಕರಾಗಿ ಗುರುತಿಸಿಕೊಳ್ಳುತ್ತೀರಿ' ಎಂದು ಟ್ವಿಟರ್ ತಿಳಿಸಿದೆ.

### ಸ್ಥಗಿತದ ಲಾಭ ಪಡೆದ ಟ್ವಿಟರ್!

ಈಚೆಗೆ ಫೇಸ್‌ಬುಕ್ ಮತ್ತು ಅದರ ಅಡಿಯ ಎಲ್ಲ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ಗಳು ಸ್ಥಗಿತಗೊಂಡ ಕಾರಣಕ್ಕೆ ಟ್ವಿಟರ್‌ಗೆ ಒಂದು ರೀತಿಯ ಲಾಭವಾಗಿದೆ. ಸ್ಥಗಿತದ ಸಮಯದಲ್ಲಿ ಸೋಷಿಯಲ್ ಮೀಡಿಯಾ ಬಳಕೆದಾರರು ಫೇಸ್‌ಬುಕ್ ಮತ್ತು ಅದರ ಅಡಿಯ ಆ್ಯಪ್‌ಗಳಿಗೆ ಪರ್ಯಾಯವಾಗಿ ಟ್ವಿಟರ್ ಅನ್ನು ಅತಿ ಹೆಚ್ಚಾಗಿ ಬಳಸಿಕೊಂಡಿದ್ದರಿಂದ ತನ್ನ ಬಳಕೆದಾರರ ಸಂಖ್ಯೆಯಲ್ಲಿ ಟ್ವಿಟರ್ ಗಣನೀಯವಾಗಿ ಏರಿಕೆ ಕಂಡಿದೆ.

ಟ್ವಿಟರ್ ಚಂದಾದಾರರ ದೂರುಗಳನ್ನು ಆಲಿಸುವುದಕ್ಕೆ ನೇಮಕ ಮಾಡಲಾಗಿದ್ದ ಧರ್ಮೇಂದ್ರ ಚತುರ್ ತಮ್ಮ ಹುದ್ದೆಯಿಂದ ನಿರ್ಗಮಿಸಿದ ಬೆನ್ನಲ್ಲೇ ಆ ಸ್ಥಾನಕ್ಕೆ ಭಾರತೀಯ ಮೂಲದವರನ್ನೇ ನೇಮಿಸಿಕೊಳ್ಳಬೇಕೆಂಬ ನಿಯಮವನ್ನು ಗಾಳಿಗೆ ತೂರಿ ಅಮೆರಿಕದ ಕ್ಯಾಲಿಫೋರ್ನಿಯಾ ಮೂಲದ ವ್ಯಕ್ತಿಯನ್ನು ನೇಮಕ ಮಾಡಿಕೊಂಡು ನಿಯಮ ಉಲ್ಲಂಘಿಸಿ ಕೇಂದ್ರ ಸರ್ಕಾರದ ಕೆಂಗಣ್ಣಿಗೆ ಟ್ವಿಟರ್ ಗುರಿಯಾಗಿತ್ತು. ಎಲ್ಲಾ ನೋಡಲ್ ಅಧಿಕಾರಿಗಳು, ಭಾರತೀಯ ಮೂಲದವರೇ ಆಗಿರಬೇಕೆಂಬ ನಿಯಮವಿದೆ. ■